Nov 10, 2012

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ

# ಎಝ್ಝಿಯಿಂದ 150 ಕೋಟಿ ಬಂಡವಾಳ

ಬೆಂಗಳೂರು: ಜಾಗತಿಕ ಮಟ್ಟದ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಎಝ್ಝಿ ನಗರದ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ 150 ಕೋಟಿ ರೂಪಾಯಿ ಬಂಡವಾಳ ಹೂಡಲಿದೆ.

ಈ ಬಂಡವಾಳದಲ್ಲಿ ಐಷಾರಾಮಿ ಬಹುಮಹಡಿ ವಸತಿ ಸಮುಚ್ಚಯವನ್ನು ನಿರ್ಮಾಣ ಮಾಡಲಿದೆ. ಇದಲ್ಲದೇ ದೇಶದಲ್ಲಿ ಒಟ್ಟು 650 ಕೋಟಿ ರೂಪಾಯಿಗಳ ಬಂಡವಾಳ ತೊಡಗಿಸಲಿದೆ.

ಈ ಕಂಪನಿ ತನ್ನ ಮೊದಲ ಯೋಜನೆಯನ್ನು ಬೆಂಗಳೂರಿನಲ್ಲಿ ಪ್ರಾರಂಭಿಸುತ್ತಿದ್ದು, ವಿಶ್ವವಿಖ್ಯಾತ ಆರ್ಕಿಟೆಕ್ಟ್ ಟೋನಿ ಆಶಾಯ್ ದೇಶದ ರಿಯಲ್ ಎಸ್ಟೇಟ್ ಕಂಪನಿಯೊಂದಿಗೆ ಕೈ ಜೋಡಿಸಿದ್ದು, 150 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಕ್ಕೆ ಸಜ್ಜಾಗಿರುವ ಕೊರಿಂತ್ ಮತ್ತು ದಿ ಅವೆನ್ಯೂಗಳಲ್ಲಿ ಐಷಾರಾಮಿ ಅಪಾರ್ಟ್‌ಮೆಂಟ್‌ಗಳ ನಿರ್ಮಾಣ ವಿನ್ಯಾಸ ಮಾಡಲಿದ್ದಾರೆ.

EZZY GROUP